MSIL

Vidya©

ವಿದ್ಯಾ

DELUXE NOTE BOOK

from the makers of

Lekhak

ಪಂಚಕೋಶ

192 Pages

Rs. 8.00

Name ____________________

Class ____________________

Subject ____________________

School ____________________

Marketed by: MSIL Mysore Sales International Limited

Dr. H.V.S. Shastry
6 Alexandra Road
Hounslow
Middx. TW3 4HN
U.K.
Tel: 0181 570 5258.

ಓಂ

ವೇದಾಂತ
oct 96

ಪಂಚಕೋಶ ಪ್ರಕ್ರಿಯೆ

ನಾವು ಪ್ರತಿನಿತ್ಯ ವ್ಯವಹರಿಸುವ 'ನಾನು' ಎಂಬುದರ ನಿಜಸ್ವರೂಪವನ್ನು ನಮಗೆ ತಿಳಿಸಿಕೊಡು-ವುದಕ್ಕೋಸ್ಕರ ಉಪನಿಷತ್ತುಗಳಲ್ಲಿ ಹಲವು ಪ್ರಕ್ರಿಯೆಗಳನ್ನು ಪ್ರತಿಪಾದಿಸಲಾಗಿದೆ.
ಈಗ 'ನಾನು' ಎಂಬುದು ಯಾವ ಯಾವುದರಲ್ಲಿ ತೋರುತ್ತದೆಯೋ ಅವನ್ನು ಬಿಡಿಸಿಕೊಂಡು ನಾನು ಎಂಬುದರ ನಿಜವಾದ ತತ್ತ್ವವನ್ನು ತಿಳಿಯುವುದಕ್ಕೋಸ್ಕರ ತೈತ್ತಿರೀಯ ಉಪನಿಷತ್ತಿನಲ್ಲಿ ಪಂಚಕೋಶಗಳ ವಿಚಾರವನ್ನು ಹೇಳಿದೆ. ~~ಪ್ರ~~
ಪ್ರಕ್ರಿಯೆ = ಪ್ರಕರಣ = ಪ್ರಕಾರ = ತಿಳಿಯುವ ಕ್ರಮ.
ಸ್ವಾಭಾವಿಕವಾಗಿ, ಪಂಚಕೋಶಗಳನ್ನು ಮೀರಿರುವ ಆತ್ಮನ ಸ್ವರೂಪವನ್ನು ಅರಿತುಕೊಳ್ಳುವುದಕ್ಕಾಗಿಯೇ ಈ ಪ್ರಕ್ರಿಯೆಯನ್ನು ಉಪದೇಶಿಸಲಾಗಿದೆ.

'ಆನಂದ ಆತ್ಮಾ ಬ್ರಹ್ಮ ಪುಚ್ಛಂ ಪ್ರತಿಷ್ಠಾ' ಎಂಬ ತೈ. ಉಪನಿಷತ್ತಿನ ಕೊನೆಯ ವಾಕ್ಯವು 'ನಾನು' ಎಂಬುದರ ಮೂಲಸ್ವರೂಪವು ಆನಂದ, ಅದೇ ಬ್ರಹ್ಮ, ಅದುವೇ ನಿಲುಗಡೆ ಎಂಬ ಉದ್ದೇಶವನ್ನು ಸ್ಪಷ್ಟಪಡಿಸಿದೆ.

ವಸ್ತುತಃ ಆತ್ಮನ ಹೊರಗಿರುವ ಪಂಚಕೋಶಗಳಲ್ಲಿ ನಾನು ಎಂಬ ತಪ್ಪು ಕಲ್ಪನೆ ಆಗಿಬಿಟ್ಟಿದೆ. ನಿಜಸ್ವರೂಪ ನೋಟದಿಂದ ಅವುಗಳಲ್ಲಿ ನಾನು ಹೊಕ್ಕಿರುವ ಆತ್ಮವು ಅವಕ್ಕಿಂತ ಬೇರೆ, ವಿಲಕ್ಷಣವಾದದ್ದು ಎಂಬುದೇ ಜ್ಞಾನ.

ಕೋಶ ಎಂದರೆ ಯಾವುದೇ ಚೀಲ ಅಲ್ಲ ಒಂದರೊಳಗೊಂದರಲ್ಲಿರುವ ಕಲ್ಪಿತ ಭಾಗಗಳು. ಯಾವ ಭಾಗಗಳಲ್ಲಿ ನಾನು ಎಂಬ ಬುದ್ಧಿಯು ತೋರುತ್ತಾ ಇದೆಯೋ ಅವನ್ನೇ 'ಐದು ಬಗೆಯಾಗಿರುವ ಕೋಶಗಳು ಎಂದು ಗುರುತಿಸಲಾಗಿದೆ, ತಿಳಿಯುವುದಕ್ಕೋಸ್ಕರ

ತತ್ವಕ್ಕೆ ಯಾವ ಭ್ರಾಂತಿಯು ಅತ್ಯಂತ ನಿಕಟವಾಗಿದೆಯೋ ಅದನ್ನು ಅತ್ಯಂತ ಒಳಗಿನ ಕೋಶ ಎಂತಲೂ ದೂರ ದೂರತರ ಭ್ರಾಂತಿಗಳನ್ನು ಹೊರ ಹೊರಗಿನ ಕೋಶಗಳೆಂದೂ ಸಂಕೇತ ಮಾಡಲಾಗಿದೆ, ಸೌಕರ್ಯಕ್ಕಾಗಿ. ಇನ್ನೊಂದು ಗಮನಾರ್ಹ ಅಂಶ ಎಂದರೆ, ಒಳಗಿನ ಕೋಶವನ್ನು ಅರಿತ (ಗ್ರಹಿಸಿದ

Not geographical } Navigation.
Not astronomical }
Cosmological

ಬಳಿಕೆ ಅವರ ಹೊರಗಿನ ಕೋಶಗಳು ಉಳಿದಿರುವುದಿಲ್ಲ. ಅರ್ಥಾತ್ ಹೊರಗಿನ (ಮಾಂಸ) ಕೋಶದ ನಾನು ಎಂಬುವುದರಿಂದ ಒಳಗಿನ (ಚಿತ್ತದ) ನಾನು ಎಂಬುದನ್ನು ಗ್ರಹಿಸಿದಂತೆ ಹೊರಗಿನ ಕೋಶವು ಒಳಗಿನದರಲ್ಲಿ ಲಯವಾಗುತ್ತದೆ/ ಅಡಕವಾಗುತ್ತದೆ. ([illegible] ವ್ಯಾಪಾರದಲ್ಲಿ ಮೇಲಿನ, ಕೆಳಗಿನ ದರಗಳು ಅಡಕವಾಗುವಂತೆ)

ನಿಜವಾಗಿ ಐದು ಕೋಶಗಳಿಲ್ಲ. ಹಾಗೆಯೇ ಅವು ಇನ್ನೂ ಹೆಚ್ಚಾಗಿರುವಂತೆಯೂ ಭಾಸವಾಗಬಹುದು. ಇರುವ ಒಂದು ತತ್ತ್ವವನ್ನೇ ಅದು ಹಾಗೆ ಇಲ್ಲದ ಆದರೆ ಹಾಗೆ ಇರುವಂತೆ ಭಾಸವಾಗುವ ಐದು ಕೋಶಗಳೆಂದು ನಾವು ವ್ಯವಹಾರದಲ್ಲಿ ಕಲ್ಪಿಸಿಕೊಂಡಿರುವುದನ್ನೇ ವೇದಾಂತವು ವಿಶ್ಲೇಷಣೆಗೆ ತೆಗೆದುಕೊಂಡಿದೆ.
ಆ ಐದು ತಿಳುವಳಿಕೆಗಳನ್ನು ಚರ್ಚಿಸಿ / ವ್ಯಾಖ್ಯಾನ ಮಾಡಿ ಅವು ತಪ್ಪು ಎಂದು ಸಿದ್ಧಾಂತ ಮಾಡಿ ಅಲ್ಲಗಳೆದು ಬಿಟ್ಟರೆ ಕೊನೆಗೆ ಏನು ಉಳಿಯುತ್ತದೆಯೋ ಅದೇ ನಾನು. ಅದು ಜ್ಞೇಯ.

ಆ ಜ್ಞಾನವನ್ನು ತಿಳಿದು ಕೊಳ್ಳಬಹುದು,
ತಿಳಿಸುವುದಕ್ಕೆ ಸಾಧ್ಯವಿಲ್ಲ

1. ಅನ್ನಮಯ ಕೋಶ

ಇದು ಅತ್ಯಂತ ಹೊರಗೆ 'ನಾನು' ಎಂಬುದನ್ನು
ಗುರುತಿಸಿಕೊಂಡ ತಪ್ಪು ತಿಳುವಳಿಕೆ. ಈ
ಸಾಮಾನ್ಯ ಅರಿವು ಎಲ್ಲರಿಗೂ ಇದೆ.
ಮನುಷ್ಯನು ಅನ್ನಮಯ ಎಂದು ಭಾವಿಸಿರುವುದು
ಸರ್ವವಿದಿತ, ಹಾಗೆಯೇ ಇದು ಅತ್ಯಂತ
ಸ್ವಾಭಾವಿಕವಾದುದು.
ಅನ್ನಮಯ ಎಂದು ತಿಳಿಯಲ್ಪಡುವ ಶರೀರವು
ಕೇವಲ ಪಾತ್ರೆ.
ಇಲ್ಲಿ ಅನ್ನ ಎಂದರೆ ಪಂಚಭೂತ ಜನ್ಯವಾದದ್ದು
ಪಾರ್ಥಿವ ಎಂದು ಅರ್ಥ
ಅನ್ನಮಯ ಪ್ರಜ್ಞೆಗೆ ಪ್ರಪಂಚವೆಲ್ಲಾ ಬರೀ
ಆಕೃತಿಗಳಾಗಿ ಕಾಣುತ್ತೆ. Bodies of
various sizes, shapes, colours etc
ಆ ಪ್ರಜ್ಞೆಯಲ್ಲಿ ನಾನು ಎಂದರೆ ನನ್ನ ದೇಹ
ಸ್ವತಃ ಸಿದ್ಧ. ನನಗೆ ಎಲ್ಲ ಅರಿವು ಆಗುತ್ತೆ
ನನ್ನ ಶರೀರಕ್ಕೆ ಪ್ರಿಯವಾದದ್ದೇ (ಪ್ರಿಯ
ವಾದದ್ದು ಇಂದಲೇ ಅವೆಲ್ಲವೂ) ನನಗೆ ಪ್ರಿಯ
ಎಂಬ ಸಮೀಕರಣ ಪ್ರತೀತವಾಗುತ್ತೆ.
ಅಂದರೆ ಮೇಲಿನೆಲ್ಲಾ ಗುಣಗಳು - ಸ್ವತಃ ಸಿದ್ಧತೆ,

ಇರುವು ಅರಿವುದು, ಪ್ರಿಯ ವಾಗಿರುವುದು –
ಎಂಬ ಆತ್ಮನ ಗುಣಗಳು ದೇಹಬುದ್ಧಿಯುಳ್ಳ
ಅನ್ನಮಯಗಳಿಗೆ = ಸ್ಥೂಲಗಳಿಂದಲೇ ಪ್ರಕಟ
ವಾಗುತ್ತವೆ.
ಆತ್ಮದ ಗುಣವೇ ಹೊರ ಚಾಚಿ ಇಲ್ಲಿರುವಂತೆ
ತೋರುತ್ತೆ. ತಪ್ಪಿಲ್ಲಿರುವ ಅನ್ನವನ್ನು
ಒಳಗೆ ಬಚ್ಚಿಟ್ಟಿದ್ದೇನಲ್ಲ, – ಅವೆಲ್ಲವ
ಹೊರಚಾಚುವಿಕೆಯ ಕಾರಣದಿಂದಾಗಿ, –
ಇದನ್ನು ನನ್ನ ಅನ್ನ ಎಂದು ಅಭಿಮಾನ
ಮಾಡಿಕೊಳ್ಳುತ್ತೇವೆ. ಅಂದರೆ 'ನನ್ನ ತನವು
ಹೊರಗೆ ಚಾಚಿತು. ಆ ಅನ್ನವು
ಸಂಬಂಧಿಸಿಕೊಳ್ಳುತ್ತಿದ್ದೇನಲ್ಲ ಇದು ಈಗ
ನನ್ನದೇ ಭಾಗವಾಯಿತು. (ಭಾಗ → ಭಾಗ)
ಇದಾಂತೆ ಅನಾತ್ಮವಾದದ್ದನ್ನು ಜಗಿದಿದ್ದೇನೆ
(ಇದನ್ನು) ನಾನು ಎಂದು ಮಾಡಿಕೊಂಡೆನು.
ಇದೇ ಅನ್ನದುಂಡೆಯು ಮರುದಿನ ಹೊಲಸಾಗಿ
ಹೊರಗೆ ಹೋಗಿದ್ದೇನಲ್ಲ ಇದರಲ್ಲಿ ಅಸಹ್ಯ
ಭಾವನೆ ಬರುತ್ತದೆ ಪ್ರಕಟವಾಗುವುದು.
ಹೀಗೆ ಬಂದೇ ವಸ್ತುವಿನಲ್ಲಿ – ಎರಡು
ಹಂತದಲ್ಲಿ – ಮೊದಲು ಇದು ಎಂಬ ಬುದ್ಧಿ,

ವ್ಯಕ್ತಿ ನನ್ನದು, ನಾನು ಎಂಬ ಬುದ್ಧಿ,
ಕಡೆಗೆ ಇದೆಲ್ಲಾ ತನ್ನದಲ್ಲ ಎಂಬ +
ಕುತ್ಸಿತ ಭಾವನೆ ಇದೆ ನನಗೆ.
ನಾನು ಈ ಸ್ಥೂಲವಾದ ದೇಹ ಎಂದು
ಹೇಳ್ಳೆನು, ಆದರೂ ಆ ದೇಹದ ಗುಣವನ್ನೂ
ಕ್ರಿಯೆಯನ್ನೂ ತನಗೆ ಸಂಬಂಧಿಸಿದೆ, ತನದಿದೆ,
ತನ್ನದೇ ಇದು, ತಾನೇ ಇದು ಎಂದು
ಹೇಳಿಕೊಳ್ಳುತ್ತಾ ಇದೆಲ್ಲಾ ವಿಶಾಲತೆಯನ್ನು
ತೋರಿಸಿಕೊಳ್ಳುವುದೇ ಇನ್ನುಳಿದ
ಕೋಶದ (ತನ್ನ ತಿಳುವಳಿಕೆಯ) ಲಕ್ಷಣ.
ಈ ಬಾಹ್ಯ ಸಂಬಂಧದ ನಾನು ಎಂಬ
ತನ್ನ ತಿಳುವಳಿಕೆಯು ದೇಹಕ್ಕಿಂತ
ಹೊರಗೂ ವಿಕಾಸಿತ ಬರುವುದು. ಇದು
ಇದಕ್ಕಿಂತಲೂ ದಡ್ಡತನ ಹೌದು:
ನನ್ನ ಕಣ್ಣೆಲ್ಲಾ ಮಬ್ಬಾಗಿ ಹೋಯಿತು, ನಾನು
ಮಬ್ಬಾಗಿ ಹೋದೆ ಎಂದೋ, ನನ್ನ ವ್ಯವಹಾರ
ವೆಲ್ಲಾ ನಷ್ಟದ ಕಡೆಗೆ ತಿರುಗಿತು ಆದ್ದರಿಂದ
ನಾನು ಇದೀಗ ವ್ಯರ್ಥ ಎಂದೋ ತಿಳಿಯುವ
ದಕ್ಕಿಂತ ಸ್ವದೇಹದಲ್ಲೂ ಆತ್ಮ ಭಾವನೆ
ಬೇಕು.

ನಾನು ದಪ್ಪವಾಗಿದ್ದೇನೆ, ನಾನು ಬೆಳ್ಳಗಿದ್ದೇನೆ, ನಾನು ಕೃಶನಾಗಿದ್ದೇನೆ ಎಂಬ ವ್ಯವಹಾರಗಳಲ್ಲಿ ನಾನು (ಈ) ದೇಹದಲ್ಲಿ ಆತ್ಮಭಾವ ಇಟ್ಟು ಕೊಂಡಿದ್ದೇನೆ. ಸದ್ಯ, ಶರೀರದ ಪಕ್ಷ ಗಳಲ್ಲಿ ಆತ್ಮಭಾವನೆಯುಳ್ಳ ಕೊಳ್ಳುವ ದೇಹದ ಆತ್ಮತ್ವಕ್ಕೆ (ಒಳ್ಳೆ) ಬಂದದ್ದು ಎಲ್ಲಕ್ಕೂ ಹಾನಿ.

ಶರೀರವಲಯದಲ್ಲಿ - ಎಲ್ಲೋ ಒಂದು ಕಡೆ, ಸದ್ಯ - ಆತ್ಮಬುದ್ಧಿ ಬಂದಿತಲ್ಲ, ಇನ್ನು ಇದನ್ನು ನಿಧಾನವಾಗಿ ಒಳಕ್ಕೆ ಕೊಂಡೊಯ್ಯಲು ಪ್ರಯತ್ನ ಮಾಡಬಹುದು. ಹೀಗೆ ಆರಂಭದಲ್ಲಿ ನಮ್ಮ ಬುದ್ಧಿ ಇರುವು ದನ್ನೇ ಒಪ್ಪಿಕೊಳ್ಳುವುದು, ಅಲ್ಲಿ (ಯಾವುದು) ನಿಲ್ಲಿಸಿಕೊಳ್ಳುವುದು ಅಸಾಧ್ಯ. ಈ ಅನುವಾದದಲ್ಲಿ ಅಧ್ಯಾರೋಪ(ಕ್ರಮ) ಇದೆ - ಸದ್ಯಕ್ಕೆ ದೇಹವನ್ನು ನಾನು ಎಂಬ ಆರೋಪ ವನ್ನು ಒಪ್ಪಿಕೊಂಡದ್ದು; ಇದರಲ್ಲಿ ಅಪವಾದವು ಇದೆ, ದೇಹದ ಶರೀರದ ಅಂತರ್ಭಾಗಗಳಲ್ಲಿ ಇದ್ದು, ಬೆಳಗುವುದಾಗಿದ್ದ 'ನಾನು' ವನ್ನು ಅಲ್ಲಗಳೆದದ್ದು ಅಪವಾದ.

ಅನ್ನಮಯವು ಜ್ಞಾನದಲ್ಲಿ ನಿಂತಿರುವ
ಬುದ್ಧಿಯನ್ನು = ಗ್ರಹಿಕೆಯನ್ನು – ಈ ಕೋಶ
ಪಡೆಯಲಿ ಬಾಹ್ಯವಾದದ್ದೇ, ಸ್ಥೂಲವಾದದ್ದೇ
ಆಗಿರುತ್ತೆ. ಅವನಿಗೆ ಪ್ರಪಂಚದಲ್ಲಿ
ಗೋಚರವಾದ ಚಿಕ್ಕ ದೊಡ್ಡ ಆಕೃತಿಗಳು
ಪದಾರ್ಥಗಳಾಗಿ ಮಾತ್ರ ಗೋಚರವಾಗುತ್ತದೆ.

2. ಪ್ರಾಣಮಯ ಕೋಶ

ದೇಹ ಹಾಗೂ ಇಂದ್ರಿಯಗಳು ಇವುಗಳ
ನಡುವಣ ತಾರತಮ್ಯ ಬರತೊಡಗಿದಂತೆಯೇ
ನಾನು ಎಂಬುದು ದೇಹದಿಂದಲ್ಲ ಬದಲಿಗೆ
ಇಂದ್ರಿಯದತ್ತ ಸರಿಯುತ್ತದೆ.
ಇಂದ್ರಿಯವೆಂಬುದು ಬಾಹ್ಯದೇಹಕ್ಕಿಂತ
ಸೂಕ್ಷ್ಮವಾದ ಕೋಶ. ಉದಾಹರಣೆಗೆ ದೇಹವು
ಅವಿಚ್ಛಿನ್ನ ಎಂದು ಅನಿಸಿದ್ದರೂ ಅದರ
ಹಲವು ಭಾಗಗಳಿಗೆ ಅಂಟಿ ಸದಾ ಇರುವಂಥ
ಇವೇ ಇಂದ್ರಿಯಗಳು ಎಂದರೆ ಕಣ್ಣು =
ಪಂಚೇಂದ್ರಿಯ ಅಂಶಗಳಿವು. ಅವುಗಳಲ್ಲಿ
ನಾನು ಎಂಬುದು ಬಂದರೆ ಜಡ + ಚೈತನ್ಯ
ಮಿಶ್ರಣ ವಸ್ತುವಾದ ದೇಹ ಬಂದ
ಪ್ರಾಣ ಚೈತನ್ಯಯುಕ್ತ ಪದಾರ್ಥಗಳು

ನಾನು ಎಂಬುದು ಅಸ್ಥಿತವಾದಂತಾಯಿತು,
ಅಷ್ಟರಮಟ್ಟಿಗೆ ಸರಿ. ಆದ್ದರಿಂದ
ಇಂದ್ರಿಯಗಳನ್ನೇ = ಪ್ರಾಣವನ್ನೇ
ನಾನು ಎಂದು ಒಪ್ಪಿ ನಾನು ಪ್ರಾಣಮಯ
ಎಂದುಕೊಳ್ಳುವುದು ತಪ್ಪು ತಿಳುವಳಿಕೆಯ
ಎರಡನೆಯ ಹಂತ.
ಈ ತಪ್ಪು ತಿಳುವಳಿಕೆಯಿಂದಲೂ ಲಾಭ
ವೇನೆಂದರೆ (ನಮ್ಮ) ದೇಹವು ನನಗೆ
= 'ನಾನು' ಗೆ ಕೇವಲ ಆಧಾರ,
ಅದೇ ನಾನಲ್ಲ ಎಂಬ ಅರಿವಾದದ್ದು.
ನನ್ನ ವಿವೇಕವು ಅಲ್ಲಿಗೆ ಬಂದು
ನಿಂತಂತಾಯಿತು. ಈಗ ಅವನು ತನ್ನ
ಇಂದ್ರಿಯದ ಚೇಷ್ಟೆಗಳನ್ನು ತನಗೆ ಅನ್ವಯಿಸಿ
ಕೊಳ್ಳುತ್ತಾನೆ. ನಾನು ದಪ್ಪ, ನಾನು ಕುಳ್ಳಗಿದ್ದೇನೆ
ಎಂಬುದನ್ನು ಒಪ್ಪದೇ, ನಾನು ನೋಡುವವ,
ನಾನು ಕೇಳುವವ, ಚಿಂತಿಸುವವ, ಎಚ್ಚರ
ವಾಗಿರುವವ, ಕ್ರಿಯಾಶೀಲನಾದವ ಎಂದು
ನಂಬುತ್ತಾನೆ. ಆಗ ತನ್ನನ್ನು ಚೇತನಮಯ
ವಾಗಿ ಕಾಣುವ ಇವನಿಗೆ ಈಗ ಪ್ರಪಂಚವೆಲ್ಲ
ವಸ್ತುಗಳಾಗಿ ತೋರುವುದಕ್ಕಿಂತಲೂ ಹೆಚ್ಚಾಗಿ

ತಾನು ಗಮನಿಸುತ್ತಿರುವುದೆಲ್ಲವೂ ಚೈತನ್ಯ
ಮಯವಾಗಿ, ಕ್ರಿಯಾತ್ಮಕವಾಗಿರುವಂತೆ,
ನಾನಾ ಮಯ ವಸ್ತುಗಳಾಗಿ ಕಾಣುತ್ತಾನೆ.
ಅಧ್ಯಾತ್ಮ ಪ್ರಪಂಚವು ಅವನಿಗೆ ಹೀಗೆ
ಕಾಣುತ್ತಿರುವಂತೆ ತೋರುವುದು.
ಇಲ್ಲಿ ಶಬ್ದ ರೂಪ ಸ್ಪರ್ಶ ರಸ ಗಂಧಗಳಿಲ್ಲ
ಆದರೆ ಕಾಲ ದೇಶ ಸುಖ ದುಃಖ ಜ್ಞಾನ
ಅಜ್ಞಾನಗಳಿವೆ:

3. ಮನೋಮಯ ಕೋಶ

ಈಗ ಇಂದ್ರಿಯಗಳೆಲ್ಲವೂ 'ನನ್ನ' ಬುದ್ಧಿಯು
ಹೇಳಿ, ಎಲ್ಲ ಸಾರಿದ ಮನಸ್ಸಿನ ಚೇತನ
= ಚೈತನ್ಯವಾಗಿ ನಾನು ಎಂಬುದಾಗಿ
ನೆಲೆಸಿದೆ. ಅವನಿಗೆ ಹೀಗೆ ಅರ್ಥವಾಗುತ್ತದೆ
ಆನೆ (ಒಂದೇ ಮನಸ್ಸಿನ) ಬೇರೆ ಬೇರೆ ಇಂದ್ರಿಯಗಳ
ಮೂಲಕ ಚೈತನ್ಯ ನಿರತವಾಗಿದ್ದರೆ ಇಂದ್ರಿಯ
ಗಳೆನ್ನುವ (ಐದಕ್ಕೆ) ದ್ವಾರಗಳು ಅಷ್ಟೇ. ಅವುಗಳ
ಮೂಲಕ ಕಾರ್ಯನಿರತವಾದದ್ದು (ಮನಸ್ಸು)
ಹೊರಗಿಂದ ಜ್ಞಾನ ತಕ್ಕೊಳ್ಳುವುದು
ಅದರಿಂದ ತನ್ನೊಳಗೆ ಚಿತ್ತವನ್ನಾಗಿ

ಕಾಣಿಸುವುದು, (ಈ ಪ್ರವೃತ್ತಿ ಮನಸ್ಸಿನದು)
ಆದರೆ ನಾನು ಎಂಬ (ಸ್ಥೂಲ ಮಬ್ಬಿನ)
ಜ್ಞಾನೋದಯವಾಗಿದೆ.
~~ಇಂದ್ರಿಂ~~ ದೇಹ, ಇಂದ್ರಿಯಗಳು ನನಗೆ
ಉಪಕಾರಕ ಉಪಕರಣಗಳು ಮಾತ್ರ
ಎಂದು ತಿಳಿದ ಆತನಿಗೆ ಈಗ ಪ್ರಪಂಚವೆಲ್ಲಾ
ದೃಶ್ಯಾದಿ ಜಡಕ್ಕಿಂತಲೂ, ಚಕ್ಷುರಾದಿಗಳ
(ಇಂದ್ರಿಯ ಜನ್ಯ) ಗುಣಮಯಕ್ಕಿಂತಲೂ
ತನ್ನದೇ (=ಮನಸ್ಸಿನ) ಸ್ವಭಾವದಂತೆ,
ಸ್ವಪ್ನದ ವಾಸನೆಗಳಂತೆ impressions
ದ್ dreams ವೃತ್ತಿಮಯವಾಗಿ, waves
ಪ್ರವೃತ್ತಿಮಯವಾಗಿ, ಚಿತ್ರವಿಚಿತ್ರವಾಗಿ
wonders ಸ್ವಾರಸ್ಯದಾಗಿ ಕಾಣುತ್ತದೆ.
ತಾನೇ ಇವುಗಳನ್ನು ಮಾಡಿ ನೋಡಿ ತಿಳಿದು
ಸುಖಿಸುತ್ತಿರುವುದರಿಂದ ನಾನು ಕರ್ತೃ,
ಜ್ಞಾತೃ, ಭೋಕ್ತೃ ಎಂದು ತಿಳಿಯುತ್ತಾನೆ.
ಈ ಸ್ವಪ್ರೇರಣೆಯಿಂದಾಗಿ ಅವನಿಗೆ
ಈಗ ಜಗತ್ತಿನ (ಜ್ಞಾನ +) ಆನಂದವು
ಇವನಿಗೆ ಹಿಂದಿನ ಎರಡು ಕೋಶಗಳಿಗಿಂತ
ಹೆಚ್ಚಾಗಿ ದೊರಕುತ್ತದೆ. ವೇದಿಕೆಯ ಸ್ವಾಮ್ಯಕ್ಕೆ

ಸುಖದಷ್ಟು ಕಾಲವು ಹೆಚ್ಚುವಂತೆ. ಆತ್ಮದ
ಒಳ್ಳೆ ವಿಚಾರದೆಡೆಗೆ ಇಟ್ಟ ಶುದ್ಧಿಭಾವನೆಯು,
ನಾವು ಪರಮಾತ್ಮನಿಗೆ ಸಂಪೂರ್ಣವಾದಷ್ಟು
(= ಅವನನ್ನು ನಂಬಿದಷ್ಟು) ನಮಗೆ
ಸುಖ ಹೆಚ್ಚುತ್ತದೆ ಎಂದು ಇದನ್ನೇ
ಬೇರೆ ರೀತಿ ಭಕ್ತಿ ಮಾರ್ಗದಲ್ಲಿ ಹೇಳುವುದು

ಹಿಂದಿನ ಹಂತದಲ್ಲಿ (ಪ್ರಾಣಮಯ ನಾನಾಗಿದ್ದಾಗ)
ನಾನು ಕ್ರಿಯಾಗಿದ್ದೆ ; ಈ ಹಂತದಲ್ಲಿ (= ಈಗ
ನಾನು ಕ್ರಿಯಾಗುವುದನ್ನು ಬಿಟ್ಟು ನಾನು
ಒಳಗೆ (= ಮನಸ್ಸಾಗಿ) ಹೋಗಿರುವುದರಿಂದ
ಈಗ ಹೊರಗೆ ಆದಷ್ಟು ಗಲಾಟೆಯಾದರೂ ಅದು
ನನ್ನನ್ನು ವಿಚಲಿತಗೊಳಿಸದು. ಏಕೆಂದರೆ
ನಾನು (= ಮನಸ್ಸು) ಆ (ಹೊರಗಿನ) ಸಂಪರ್ಕ
ಗಳ ತಂತುಗಳನ್ನು ಕಡಿದುಕೊಂಡಾಗಿದೆ.
ಪ್ರಾಣಕ್ಕೆ ನನ್ನ ಸ್ನೇಹವಾದ (= ಮನಸ್ಸಿನ)
ತಾದಾತ್ಮ್ಯವನ್ನು ತಂದುಕೊಂಡದ್ದರಿಂದ
ಈ ಪರಿಗಿದ್ದ ಇಂದ್ರಿಯಗಳ ಜೊತೆಯ ನನ್ನ
ತಾದಾತ್ಮ್ಯವನ್ನು ತಪ್ಪಿಸಿಕೊಂಡಂತಾಯಿತು.

ಸಾಮಾನ್ಯರಿಗೆ ಕನಸಿನಲ್ಲಿ ಆಗುವ ಅನುಭವದಂತೆ ನಾನು ಈಗ ಒಂದು ದೃಷ್ಟಿಯಲ್ಲಿ ನೋಡುವವನಾಗಿ ಇರುವ, ಇನ್ನೊಂದು ದೃಷ್ಟಿಯಲ್ಲಿ ನಾನೇ ನೋಡಿಸಿಕೊಳ್ಳುವವನಾಗಿ ಇರುವ.

ಮನುಷ್ಯನಿಗೆ ಆತ್ಮನಿಂದಾಗಿ ಮೂರು ವಿಧವಾದ ಶಕ್ತಿ (ಭ್ರಾಂತಿ!) ಸಿಕ್ಕಿದೆ

ಕರ್ತೃತ್ವ ಶಕ್ತಿ = ನಾನು ಎಲ್ಲವನ್ನು ಮಾಡುತ್ತಿರುವವ ಎಂಬ ಭಾವನೆ

ಜ್ಞಾತೃತ್ವ = ನಾನು ಎಲ್ಲವನ್ನು ತಿಳಿಯುತ್ತಿರುವೆನು ಎಂಬ ವಿಶ್ವಾಸ

ಭೋಕ್ತೃತ್ವ = ನಾನು ಎಲ್ಲದರಿಂದ ಸುಖ ದೊರಕಿಸಿಕೊಳ್ಳುವೆನು ಎಂಬ ನಂಬಿಕೆ.

ಕರ್ತೃತ್ವವು ಎಲ್ಲವನ್ನು (ತಾನು) ಮಾಡುವ ಶಕ್ತಿ ಜಗತ್ತಿನ ಆರಂಭ ಆದಾಗಿನಿಂದ, ಎಚ್ಚರದಲ್ಲಿ, ಏನೋ ಒಂದು ಕ್ರಿಯೆಯನ್ನು ಮಾಡಿ ಎಲ್ಲವನ್ನು ಸೃಷ್ಟಿ ಮಾಡಿಕೊಳ್ಳುತ್ತಾನಲ್ಲ, ಇದೇ ಕರ್ತೃತ್ವ ಶಕ್ತಿ

ಜ್ಞಾತೃತ್ವ ಶಕ್ತಿಯು ತನ್ನ ಎಲ್ಲವನ್ನು ಅರಿತುಕೊಳ್ಳುವುದಕ್ಕೆ ಕಾರಣವಾದುದು.

ಮೂರನೆಯದು ಭೋಕ್ತೃತ್ವ ಶಕ್ತಿ, ತನಗೆ ಎಲ್ಲವನ್ನು ಅನುಭವಿಸಲು ಮೂಲವಾದದ್ದು.

ಮೇಲಿನ ಮೂರೂ ಅಂಶಗಳು ಆತನಿಗಲ್ಲದೆ ಇನ್ನಾವುದಕ್ಕೂ ಸಂಬಂಧಿಸಿದ್ದಲ್ಲ. ಹಾಗೆ ಏನಾದರೂ ಬೇರೆಡೆ ಅವು ತೋರುತ್ತಿದ್ದರೆ ಅದೊಂದು ಈ ಸೃಷ್ಟಿಯ ಸ್ವಾರಸ್ಯ.

ಮನೋಮಯದಲ್ಲಿ ಆತ್ಮವನ್ನು ಭಾವಿಸು (ಕಾಣು) ತ್ತಿರುವವನು ಸ್ವತಃ ಕರ್ತೃ ಜ್ಞಾತೃ ಹಾಗೂ ಭೋಕ್ತೃ ಎಂಬ ತ್ರಯ—ವ್ಯಕ್ತಿಯಾಗಿರುತ್ತಾನೆ, ~~ಹೊರ~~ ತನ್ನಿಂದ ಹೊರಗೆ ಅವು ಇಲ್ಲ ಎಂದು ಅವನಿಗೆ ಖಚಿತವಾಗಿದೆ.

4. ವಿಜ್ಞಾನಮಯ

ಮನಸ್ಸಿನ ಸ್ತರಕ್ಕಿಂತ ಬುದ್ಧಿಗೆ ಪ್ರಜ್ಞೆ ಇದ್ದಾಗ. ಈ ಅವಸ್ಥೆ ಎಂತಿ ಹೊಂದಿದವ ಮನಸ್ಸನ್ನು ಗೆದ್ದವ. ತತ್ವಲವಾಗಿ ಇರುವವನು ಕ್ರಮೇಣ ತಾನು ಕರ್ತೃ ಎಂಬುದನ್ನು ಅಲ್ಲಗಳೆಯುತ್ತಾನೆ ವಿಶಾಲದ ಜ್ಞಾತೃತ್ವ ಭಾವನೆ ಇವನಲ್ಲಿ ಪ್ರಜ್ವಲವಾಗುತ್ತದೆ. ತಾನು ಮಾಡುವವನಲ್ಲ. ಅವುಗಳು ದೇಹ ಇಂದ್ರಿಯ ಮನಸ್ಸುಗಳ ಉಪಾಧಿಗಳು / ಕಾರುಭಾರ, ತನಗೆ ಸಂಬಂಧವಿಲ್ಲದ್ದು. ತನಗೆ ಬೇರೆಯವರ ಕಾರ್ಯಗಳು ತೋರುತ್ತವೆ, ನಾನು ಕೇವಲ ಜ್ಞಾತೃ [illegible] ಕಾರ್ಯಗಳ ಪರಿಣಾಮದ ಅನುಭವವನ್ನು ಭೋಗಿಸುತ್ತಿರುವವನು ಎಂಬುದು 'ಚೇತನ' ಮತ (ಮತಿ) ಉದಾಹರಣೆಗೆ, ವಿಜ್ಞಾನಿಗಳು ಪ್ರಯೋಗಾಲಯದಲ್ಲಿ, ಸಂಶೋಧನೆಯಲ್ಲಿ ನಿರತರಾಗಿರುವಾಗಿನ ನಿಶಿತ ಮತಿಯಂತೆ. ಈ ಬುದ್ಧಿಯೇ [illegible] ಆಗಿನ ಸ್ವರೂಪ, ವಿಕಾಸ.

ಅಂದರೆ, ಇವನು ಈಗ ಕ್ರಿಯೆ ಸಾಗಿಸುವ ಶಾಂತಿಸುವುದನ್ನು ಬಿಟ್ಟ. ಇದಕ್ಕೆ ಮುಂಚೆ ಏನು ಮಾಡಲಿ, ಅದನ್ನು / ಇದನ್ನು ಮಾಡಲು ಏನು ಮಾಡಬೇಕು / ಮಾಡೋಣ ಎಂತೆಲ್ಲ ಚಿಂತಿಸುತ್ತಿದ್ದ. ವಿಚಕ್ಷಣ = ಚಿಂತನೆ ಎಂಬುದು ಅವನ nature ಆಗಿದ್ದಿತು, ಸ್ವಾರ್ಥ ಕ್ರಿಯೆಯನ್ನು ಬಿಟ್ಟರೆ ಏನೋ ಮುಳುಗಿ ಹೋಯಿತು, ಕಾರ್ಯವಿಲ್ಲದಿದ್ದರೆ ವ್ಯರ್ಥ etc ನಾನು ಇರುವುದೇ ಕೆಲಸ ಮಾಡುವುದಕ್ಕೆ ಎಂದೆಲ್ಲ ನಂಬಿಕೆಯಿದ್ದುದು ಈಗ ಕಳಚಿದ ಭ್ರಾಂತಿಯಾಗಿದೆ. ಮನೋಲಯವಾದ ಕೂಡಲೇ ಅದೆಲ್ಲ ಮಾಯವಾಯಿತು. ಕ್ರಿಯೆಯಿಂದಲೇ ಸುಖ / ಆನಂದಕ್ಕೆ ಕಾರಣ ಅಲ್ಲ, ತನ್ನ ನಿಜವಾದ ಅರಿವು ಸುಖಪ್ರದ ಎಂಬುದು ಅವನ ನಿಜವಾದ = ಅಂತರಿಕ ಅನುಭವಕ್ಕೆ ಬಂದಿದೆ. ಅಧ್ಯಾತ್ಮ ಏನೂ ಒಂದನ್ನು ಅರಿಯ ತೊಡಗುವುದಕ್ಕಿಂತಲೂ ಅರಿವು ಎಂಬ ವಸ್ತುವಿನ ತಿಳಿಯುವಿಕೆಗಾಗಿ ಅವನ ಗಮನ ಕೇಳ್ಕೆಗೆ ಹೋಗುತ್ತಿದೆ.

Not knowing of an object but knowing is the object

ಪೂರ್ಣವುದರಿಂದಲ್ಲ, ತಿಳಿಯುವಿಕೆಯಿಂದ
ಆನಂದ ಅವನಿಗೆ ಈಗ.
ತಾನು ತಟಸ್ಥನಾಗಿ ಜಗತ್ತನ್ನು ಅರಿಯುತ್ತ
ಅರಿಯುತ್ತಲೇ ಅವನು ~~ಈಗ ಆನಂದ~~ ತಿಳಿ
ಯಾದ ಶುದ್ಧವಾದ ಆನಂದವನ್ನು ನೇರವಾಗಿ
~~[illegible]~~ ಸವಿಯತೊಡಗಿದ್ದಾನೆ.
ಏನೋ ಒಂದನ್ನು ಮಾಡಿ ಅಲ್ಲ, ~~ಏನೋ ಒಂದನ್ನು~~ / ಏನೇನನ್ನೂ ತಿಳಿದೇ
ಅವನಿಗೆ ಸುಖವಾಗುತ್ತಿರುತ್ತದೆ ಈಗ.
ಅನುಭವ ಎಂಬುದನ್ನು ಜ್ಞಾನವಾಗಿ ಪಡೆಯುತ್ತಾನೆ

ಈ ಹಂತದಲ್ಲಿದ್ದವನಿಗೆ ಸಮಸ್ತ ಜಗತ್ತು
ಈಗ ಜಡವಾಗಿರದೆ, ಚೇಷ್ಟಾದಿ ಕ್ರಿಯೆಗಳೂ
ಗುಣಗಳೂ ಆಗಿರದೆ, ಮನೋವೃತ್ತಿಗಳೂ
ಆಗಿರದೆ, ಇವೆಲ್ಲವೂ ಪದಾರ್ಥಗಳ ನಿಶ್ಚಯ
ಸ್ವರೂಪವಾಗಿ ಕಾಣುತ್ತಿರುತ್ತವೆ.
ಪ್ರತಿಯೊಂದು ಸ್ಪಂದನವೂ ~~[illegible]~~ ಇದೊಂದು
ಜ್ಞಾನ, ಇದು ಇನ್ನೊಂದು ಜ್ಞಾನ, ಇದು ಬೇರೆ
ಜ್ಞಾನ ಎಂಬ ಅವನ ಅನುಭವಕ್ಕೆ ಬರುತ್ತದೆ.
ಹಿಂದಿನ ಹಂತದಲ್ಲಿ, ಮನೋವೃತ್ತಿಯಲ್ಲಿ

ಕ್ರಿಯೆ – movements ಇದ್ದಂತೆ, ಈಗ
ಇದು ಶುದ್ಧ ಜ್ಞಾನ ಅಷ್ಟೇ ಆಗುವುದು.
ಹೀಗೆ ಪರಿಶುದ್ಧ ಜ್ಞಾನಾನುಭವಿಗಳ
ಪ್ರೇರಣೆಯು ಅಖಂಡ ವಿಶ್ವದ ವಸ್ತು
ವಿವೇಕಕ್ಕೆ ಹೊರಟವನು ವಿಜ್ಞಾನಮಯದಲ್ಲಿ
ಶುದ್ಧನಾದವನು ಎನ್ನುತ್ತವೆ ಶಾಸ್ತ್ರಗಳು.
ಒಬ್ಬ ವಿಜ್ಞಾನಿಯು ವಸ್ತುವಿನ ಪರೀಕ್ಷೆಗೆ
ಹೊರಟಾಗ ವಿಜ್ಞಾನಮಯನೇ ಆಗುತ್ತಾನೆ.
ಆಗ ಅವನು ದೇಹ ಇಂದ್ರಿಯ ಮನಸ್ಸುಗಳನ್ನು
ಉಪಯೋಗಿಸುತ್ತಿದ್ದರೂ ಆ ಕ್ಷಣದಲ್ಲಿ
ಅವನು ವಿಜ್ಞಾನಮಯನಾಗಿ ನಿಂತುಕೊಂಡಿರುತ್ತಾನೆ.
ಎಲ್ಲದರ ಸಂಶೋಧನೆಗಳೂ ಆ ವಿಜ್ಞಾನವು
ವಿಕಾಸಿತ್ರವಾಗಲು, ಶಕ್ತಿಯುತವಾಗಲು, ಅಷ್ಟೇ.
ಒಂದು ಬಿಡಿ ವಸ್ತುವನ್ನಲ್ಲ, ಒಂದು ಪ್ರತ್ಯೇಕ
ವಿಷಯವನ್ನಲ್ಲ, ಅಖಂಡ ಪ್ರಪಂಚವನ್ನೇ
ತನ್ನ ಜ್ಞಾನಾನ್ವೇಷಣೆಗೆ, ವಿವೇಕಕ್ಕೆ,
ತಿಳಿದುಕೊಳ್ಳಬೇಕಾದ ಪದಾರ್ಥ ಎಂದು
ಎಲ್ಲವನ್ನು ಒಬ್ಬಾಗಿ ಸ್ವೀಕರಿಸಿದಾಗ
ಅವನು ಶುದ್ಧನಾದ ವಿಜ್ಞಾನಮಯ
ನಾಗಿರುವನು.

ಹಿರಣ್ಯಗರ್ಭಕ್ಕೆ ಆ ಬುದ್ಧಿ ಸಾಮರ್ಥ್ಯ
ಇರುವುದು. ಅಪಾರತೆ ಆ ಬುದ್ಧಿ
ಸಾಮರ್ಥ್ಯ = ವಿಕಾಸ ವಾದವನು ಹಿರಣ್ಯ
ಗರ್ಭ ತತ್ವಕ್ಕೆ ಸಮಾನನಾಗುತ್ತಾನೆ.

ವಿಜ್ಞಾನಮಯ ಸ್ವರೂಪವು ಆನಂದಮಯ
ಸ್ವರೂಪಕ್ಕೆ ಅತ್ಯಂತ ಸಮೀಪವಾದುದು. ಅವು
ಗಳ ನಡುವೆ ಒಂದೇ ಒಳ್ಳೆಯ ಭೇದವಿದೆ,
ವಿಜ್ಞಾನಮಯದಲ್ಲಿ ಅರಿಯುವವ ನಾನು,
ರೆ ಅರಿಯುವುದರಿಂದ ಸುಖ ಪಡುತ್ತಿರುವವ
ನಾನು ಎಂಬ ಪ್ರಜ್ಞೆ ಉಪಾಧಿಯಾಗಿ
ಉಳಿದುಕೊಂಡಿದೆ. ನನಗಾಗುತ್ತಿರುವ ಜ್ಞಾನ
ದಿಂದ ನಾನು ಆನಂದ ಪಡುತ್ತಿದ್ದೇನೆ ಎಂಬ
ಅತಿಸೂಕ್ಷ್ಮವಾದ ಅಹಂಭಾವವು ಅಲ್ಲಿ
ಉಳಿದುಕೊಂಡಿದೆ.
ಪ್ರಾಣಮಯದಲ್ಲಿ ಕರ್ತೃತ್ವ ಜ್ಞಾತೃತ್ವ ಭೋಕ್ತೃತ್ವ
ಬುದ್ಧಿಗಳು ಮನೋಮಯದಲ್ಲಿ ಭೋಕ್ತೃ
ಎಂಬ ಜ್ಞಾತೃತ್ವದ ಆನಂದವು,
ವಿಜ್ಞಾನಮಯದಲ್ಲಿ ಜ್ಞಾತೃತ್ವದಿಂದ
ಆನಂದ ಎಂಬ ಪ್ರಜ್ಞೆಗಳು ಉಳಿಯುವುದು

ಕೊಂಡಿರುತ್ತದೆ.
ವಿಜ್ಞಾನಮಯದಲ್ಲಿ ಅರಿಯುವವ ನಾನು ಎಂಬ ಪ್ರಜ್ಞೆ ಉಳಿದುಕೊಂಡಿದೆ. ಅದಕ್ಕೆ ಮುಂದಿನ ವಿವೇಕವು ಅರಿವೇ ನಾನು (ನಾನೇ ಅರಿವು ಆಗುವೆನು) ಎಂದು ಅನುಭವವಾಗುವುದು.

ವಿಜ್ಞಾನಮಯದಲ್ಲಿ ಆನಂದ ಪ್ರಾಪ್ತಿಗಾಗಿ ಜ್ಞಾನದ ನೆರವು ಬೇಕಾಗಿರುತ್ತದೆ. ಆ ಅಪೇಕ್ಷೆಯೂ ಪೂರ್ಣವಾಗಿ ಕಳಚಿ ಆನಂದದಿಂದಲೇ ಆನಂದ, ಆನಂದದ ಆನಂದ ಪಡೆಯುವವ ಕೇಂದ್ರಬಿಂದು ಮಧ್ಯಸ್ಥನಾದ ಆನಂದಮಯ. ಆನಂದದಲ್ಲಿ ಇನ್ನೊಂದರ ಅಪೇಕ್ಷೆಯಿಲ್ಲದೆ ಅನಿಸುವುದು ಇದು.
ಆತ್ಮದ್ದೇ ಆನಂದ ಹೊರಚೆಲ್ಲುತ್ತಿರುತ್ತದೆ ಐದು ಕೋಶಗಳ ಮೂಲಕ ಹೊರಗೆ. ಬೆಂಕಿಯ ಕೆಂಡದ ಶಾಖದಿಂದ ಬೆಚ್ಚಗಾದ ನೀರಿನಲ್ಲಿ ಅದ್ದಿದ ಬಟ್ಟೆಯು ಇತರದಂತೆ far removed

ಸಂಚಿತ ಕರ್ಮದಲ್ಲಿ ಪ್ರಕೃತಿ ಹಾಗಾಗ ಐ ವಲಯಗಳಲ್ಲಿ
ಸುಖಗಳು. Fair removed.
ಅವುಗಳಲ್ಲಿ ಪ್ರಕೃತಿ ಒಂದೊಂದು ಅಭ್ಯಾಸವನ್ನು
ಈ ಉಪಾಧಿಯನ್ನು ತೆಗೆದರೆ ಅಧಿಕ
ಲಾಭ, ಹೆಚ್ಚು ಸುಖ, ನೆಮ್ಮದಿ ಸ್ವರ್ಗ.
ಎಲ್ಲ ಕರ್ಮಗಳನ್ನು ತೊಳೆಯಬೇಕು, ಎಲ್ಲ
ವನ್ನು ಒಳ್ಳೆಯದಾಗಿ ತೆಗೆಯುವುದಲ್ಲ,
ವೇದಾಂತದ ತಾತ್ಪರ್ಯ
ಮೊದಲನ ಮಾನಸಿಕವಾಗಿ ಕಲ್ಪಿಸಿದ ನಿಜ
ತಿಂದು ಸುಖಪಡುವುದಕ್ಕೆ, ಆ ಸುಖಗಳ
ಸಂತೋಷ ಪಡುವುದಕ್ಕೆ, ಮನುಷ್ಯನೇ
ತಡವಿ ಮುದ್ದಾಗಿ ಆನಂದ ಪಡುವುದಕ್ಕೆ
ಎಷ್ಟು ಅಂತರಗಳಿವೆ?
ಯಾಗ ಕರ್ಮದ ಆಚೆಯ ಕರ್ಮದ
ಸಂತೋಷ.

ಪ್ರಕೃತಿ - ಪುರುಷ ಪ್ರಕ್ರಿಯೆಯಲ್ಲಿ ಎಲ್ಲವನ್ನು ವಿವೇಕ ಮಾಡುವುದರಲ್ಲಿ ಶ್ರೇಷ್ಠರಾದ ಸಾಂಖ್ಯರು ತತ್ತ್ವದ ವಿಚಾರ ಮಾಡುತ್ತಾ ಮನೋವಿಜ್ಞಾನದವರೆಗೆ ಬಂದರು, ತತ್ತ್ವವನ್ನು ಗ್ರಹಿಸಿದರು. ಕರ್ತೃತ್ವವನ್ನು ಪ್ರಕೃತಿಯಿಂದ ಭೋಕ್ತೃತ್ವವನ್ನು ಪುರುಷನಿಂದ ಬೇರೆ ಕಳೆದರು. ಪ್ರಕೃತಿಯು ನರ್ತಿಸುತ್ತಿದ್ದರೆ ಪುರುಷನು ನೋಡುವ ಆನಂದ ಪಡೆಯುತ್ತಾನೆ ಎಂದರು. ಆದ್ದರಿಂದ ಪುರುಷನ ಆನಂದಕ್ಕೆ (ಬಾಹ್ಯ) ಇನ್ನೊಂದರ ಅವಲಂಬನೆ ಇದೆ ಎಂದಾಯಿತು.

ತೈತ್ತಿರೀಯ ಉಪನಿಷತ್ತು ಈ ತತ್ತ್ವವನ್ನು ಒಂದು ಶ್ರುತಿಯಲ್ಲಿ ಹೇಳಿದೆ, —

ಪ್ರಿಯಮೇವ ಶಿರಃ ಮೋದೋ ದಕ್ಷಿಣಃ ಪಕ್ಷಃ
ಪ್ರಮೋದ ಉತ್ತರಃ ಪಕ್ಷಃ ಆನಂದ ಆತ್ಮಾ
ಬ್ರಹ್ಮ ಪುಚ್ಛಂ ಪ್ರತಿಷ್ಠಾ —

ಪಕ್ಷಿಯೊಂದರ ಪ್ರತಿಮೆಯಲ್ಲಿ ಇದು ಹೇಳಲ್ಪಟ್ಟಿದ್ದು ಸಂಕೇತವಾಗಿದೆ.

ಆನಂದದ ಹೊರ ಪದರಗಳು ಅಂತತಃ ಕೋಶ
ಗಳಲ್ಲಿ ವಿವಿಧವಾಗಿ ಸ್ಫುರಿಸು/ ಕ್ರಮಿಸುತ್ತಿವೆ.
ಮಧ್ಯದಲ್ಲಿ ಕೇಂದ್ರ ಬಿಂದುವಿನಲ್ಲಿ ಇರುವ
ಆತ್ಮನು 'ನಾನು' ಎಂಬ ಅನಿರ್ವಚನೀಯದ
ಜ್ಞಾನ ಎಂಬ ಅನುಭವ.
ಅದು ನಮ್ಮಲ್ಲಿ ಇದೆ. ಅಲ್ಲಿಗೆ ಹೋಗಬೇಕು
ಅಂತೆ ಯಾವುದೋ ಹೊಂದು ಬಿಟ್ಟ ದ್ವಾರ, ಹೊರ
ಬೇಕಾಗಿಲ್ಲ, ಯಾವುದೋ ಕ್ರಿಯೆಯನ್ನು ಮಾಡಿ
ಅದನ್ನೇನು ಪಡೆಯಬೇಕಾಗಿಲ್ಲ, ಎಲ್ಲೋ
ನಾವು ನೋಡುತ್ತಿರುವುದರಿಂದ ಅದು
~~ಗು~~ ಮರೆಯಾಗಿದೆ.
ಅದನ್ನು ಕಾಣಬೇಕಾದರೆ ಏನು ಮಾಡಬೇಕು?
ಎಲ್ಲೋ ನೋಡಬಾರದು, ಅಷ್ಟೇ!
ಇದ್ದದ್ದನ್ನು ಇದ್ದ ಹಾಗೆ ತಿಳಿದುಕೊಂಡು
ಅಲ್ಲಿಯೇ ಪ್ರತಿಷ್ಠಿತನಾಗಬೇಕು.
ಸ್ಥೂಲದೇಹಕ್ಕಿಂತ ನಾನು ಬೇರೆ, ಸೂಕ್ಷ್ಮ
ದೇಹಕ್ಕಿಂತ ನಾನು ಬೇರೆ; ಅವು
ನನ್ನನ್ನು ಬಿಟ್ಟು ಹೋದರೆ ನನಗೆ ಬಾಧೆ
ಯಾಗದು ಎಂಬುದನ್ನು ಮನದಟ್ಟು
ಮಾಡಿಕೊಳ್ಳಬೇಕು.

ವಿಷಯ ಸುಖವು ಮನಸ್ಸಿನ ಗಲಿಬಿಲಿ
ಯ ನಡುವೆ ಬರುವ ಕಿಂಚಿತ್ತು ಸುಖ,
ನಿಜವಾಗಿ ಆನಂದಮಯನ ಒಂದೆರಡು
ಕಿರಣ ಗೋಚರದಿಂದಾದ ಸುಖ.
ಇದು ಪ್ರಕ್ಷುಬ್ಧ ~~ಕಿರಣಾವಳಿ~~ ಜಲದ
ಮೇಲೆ ಹೊಳೆಯುವ ಸೂರ್ಯ ಬಿಂಬದ
ಭಾಗದಂತೆ. ಜಲವು ಸ್ತಬ್ಧ ವಾದರೆ
ಹೆಚ್ಚು ನಿಚ್ಚಳ ಪ್ರತಿಬಿಂಬ ಗೋಚರ
ಸಾಧ್ಯ.
ಪ್ರಾಪಂಚಿಕ ವಸ್ತುವಿನ ಸಂಪರ್ಕದ ದ
ಕ್ಷಣದಲ್ಲಿ ಒಂದು ಸುಖ ದೊರಕಿತಲ್ಲ, ಆ
ವಿಷಯ ಸುಖದ ಹಂತದಲ್ಲಿ ಮನಸ್ಸು
ಕ್ಷಣಿಕವಾಗಿ ಇಷ್ಟ ವಸ್ತು ಸಿಕ್ಕಿದ ವಿಷಯದ
ಅವಲಂಬನೆ ಬೇಕಾಗುತ್ತದೆ ಎಂಬ ಭ್ರಾಂತಿ
ಯುಂಟಾಗುತ್ತದೆ. ವಸ್ತುತಃ, ಆಗ, ಅಸ್ಥಿರ
ಮನಸ್ಸಿನ, ಯಾವಾಗಲೂ ಕುಣಿಯುವ
ಮನಸ್ಸು ಕ್ಷಣಕಾಲ ಸ್ತಬ್ಧವಾಗಿದ್ದರಿಂದ
ಆನಂದತಂತುವಿನ ಸಂಬಂಧವಾಗಿ ಒಳಗಿನಿಂದ
ಆನಂದವು ಹೊರಕ್ಕೆ (ಅಂಶತಃ) ಪ್ರವಹಿಸಲು
ಅವಕಾಶವಾಯಿತು. ಇದನ್ನು ನೆಕ್ಕಿದ

ಬುದ್ಧಿಯನ್ನು ಮನಸ್ಸು ಮರುಳು ಮಾಡಿ
ಆ ಸುಖ ಕಾರಣ ವಿಷಯ ಸಂಪರ್ಕನ
ದ ಫಲ ಎಂದು ತಪ್ಪು ಭಾವನೆ
ಕಲ್ಪಿಸಲು ಅವಕಾಶ ಹುಟ್ಟಿ ಕೊಳ್ಳುತ್ತು.
ಅದು (= ಆನಂದ) ಹೊರಗಿಂದ ಬರಲಿಲ್ಲ,
ಒಳಗಿಂದಲೇ ಬಂದದ್ದು ಎಂದು ತಿಳಿದರೆ
ಆ ಕಾರಣದ ಎಡೆ / ವಿಷಯದ ಅಪೇಕ್ಷೆ
ಬಿಟ್ಟು ಹೋಗುತ್ತದೆ. ಇದೇ ಆಗಬೇಕಾದ್ದು.
ಅಂಗ ಇಲ್ಲದ ಆವರಣಗಳು ನಶಿಸಬೇಕು.
ಪಂಚಕೋಶಗಳನ್ನು ನಷ್ಟ ಮಾಡಲು ಪಂಚ
ಕೋಶಗಳ ಉಪದೇಶ ಮಾಡಿದೆ ವೇದಾಂತ
ಜಿಲೇಬಿ ತಿಂದರೆ ಸಿಗುವ ಸುಖವನ್ನು
ಅದರ ವಾಸನೆಯಿಂದ ಸ್ವತಃ ಉಂಟಾದ
(without any side effect) ಸಂತೋಷ
ಅದಕ್ಕಿಂತ ನೂರು ಪಟ್ಟು ಹೆಚ್ಚಿನದು.
ಇದನ್ನೇ ಉಪನಿಷತ್ತು
ಶ್ರೋತ್ರಿಯಸ್ಯ ಚ ಅಕಾಮಹತಸ್ಯ
ತೇ ಶತಂ - - - - ಎಂದು ಹೇಳುತ್ತಾ ಕ
ದಣ್ಣ ಹೇಳಿದೆ.

ಯೋಚನೆಯೊಂದನ್ನು ಬಿಟ್ಟುಬಿಟ್ಟಾಗ ಸಿಗುವ ಲಾಭ ಆ ಭ್ರಮಾಧೀನ ಯೋಚನೆಯ ಜೊತೆಗಿನ ಎಂದ ಕ್ಷಣಿಕವಾಗುವ ಸುಖಕ್ಕಿಂತ ಅಧಿಕವಾದುದು ಎಂಬ ಸತ್ಯವು ಪ್ರತಿಕ್ಷಣಕ್ಕೂ ಅನ್ವಯಿಸುತ್ತದೆ

ಹೊರಗಿನ ವಿಷಯ ಯೋಚನೆಗಳಿಂದ ನನ್ನನ್ನು ಬಿಡಿಸಿಕೊಂಡು ಒಳಕ್ಕೆ / ಹಿಂದಕ್ಕೆ ನಾನೆಂಬ ಭಾವನೆಯನ್ನು ಸರಿಸಿಕೊಂಡಂತೆ ಅದರ ಸ್ವರೂಪವು ಮಿಶ್ರಿತ ವಸ್ತುವಿನ ಸಂಬಂಧದಿಂದ ಮುಕ್ತವಾಗುತ್ತದೆ, ಮಿಶ್ರಿತ ರೂಪ ಬಿಟ್ಟು ಶುದ್ಧವಾಗುತ್ತಾ ಹೋಗುತ್ತದೆ.

ಹಾಗೆ ಕಲ್ಪಿತ 'ನಾನು'ವಿನ ಎಲ್ಲವನ್ನು ನೋಡುತ್ತ ನೋಡುತ್ತ ಬಿಡಬೇಕು? ಮನಸ್ಸಿನ ವಿಕಾರಗಳನ್ನು ನೋಡುತ್ತ ನೋಡುತ್ತ ಮನಸ್ಸಿನಿಂದ ಹಿಂದೆ / ಒಳಕ್ಕೆ ಸರಿಯಬೇಕು.

ಇಂತಹ ಸಾಕ್ಷಿ ಅನುಸಂಧಾನ ಬೇಕು.

ಇದೇ ಕಾರಣದಿಂದ ಮನಸ್ಸು ಪದಗಳು ತಂದು
ಸಾಕ್ಷಿಗೆ ತೋರಿಸುವ / ಒದಗುವ ತವಕ
ಈ ಮನಸ್ಸಿನಗೆ. (= ಎಚ್ಚರ)
ತಾನು ತಂದಿರುವುದನ್ನು ಸಾಕ್ಷಿಗೆ ತೋರಿಸಿದ
ಮನಸ್ಸು, ಸಾಕ್ಷಿಯು ಅದು ಏನು ಎಂದು
ಗಮನಿಸುವ ಮುನ್ನವೇ ಅದನ್ನು ಬಿಡಲು
ಮತ್ತೊಂದನ್ನು ತರಲು ಹೊರಗೋಡುತ್ತದೆ
ಸಾಕ್ಷಿಗೆ ಏನನ್ನು ನೋಡಬೇಕಾಗಿಲ್ಲ
(ಅದೇ ಅದರ ಗಲ್ಲ [illegible]!); ಮನಸ್ಸು
ಅದನ್ನು ತಂದು ತೋರಿಸದೇ ಇರುವುದಿಲ್ಲ.
ತಂದ ವಸ್ತುವನ್ನು ಸಾಕ್ಷಿಯು ಪರಿಶೀಲಿಸು
ವದಕ್ಕು ಮುನ್ನವೇ ಮನಸ್ಸಿಗೆ ತೃಪ್ತಿಯಾ
ತ್ತದೆ, ಸಾಕ್ಷಿಯ ಅಸ್ತಿತ್ವದ ಮುಂದೆ
ಇದೇನು ಮಹಾ ಲೆಕ್ಕ ಅಂತ. ನಾಚಿಕೆಯಿಂದ
ತಂದದ್ದನ್ನು ಬಿಡಲು ಮತ್ತೆ ಹೊರಕ್ಕೆ
ಓಡುತ್ತದೆ.
ಮನಸ್ಸಿನ ಎಲ್ಲವನ್ನು ನೋಡಿ / ತಿಳಿದು
ಕೊಂಡು ಅಭ್ಯಾಸ ವಾಗದೆಯೇ ಹೊರತು
ನೋಡಿಸಿಕೊಂಡು ಅಭ್ಯಾಸವಾಗಿಲ್ಲ.

ಸಾಕ್ಷಿಯಿಂದ ನೋಡಿಸಿಕೊಳ್ಳದೆ ಮನಸ್ಸಿಗೆ ತೃಪ್ತಿಯಿಲ್ಲ. ಆದರೆ ಸಾಕ್ಷಿಯು ತನ್ನನ್ನು ನೋಡುವುದನ್ನು ಎದುರಿಸುವ ಶಕ್ತಿಯಿಲ್ಲ. ಸಾಕ್ಷಿಯು ತನ್ನನ್ನು ನೋಡಲಿ ಎಂದು ಆಸೆ, ಆದರೆ ಎಲ್ಲಾ ತನ್ನನ್ನು ಸಾಕ್ಷಿಯು ನೋಡಿಬಿಡುವನೋ ಎಂಬ ಅಳುಕೂ ಮನಸ್ಸಿಗಿದೆ. ಸಾಕ್ಷಿಗೆ ಏನೂ ಬೇಕಾಗಿಲ್ಲ. ಆದರೆ ಆ ಸಾಕ್ಷಿಗಾಗಿ ಏನಾದರೂ ಮಾಡದೆ ಈ ಮನಸ್ಸು ತೆಪ್ಪಗಿರುವುದಿಲ್ಲ. ಸಾಕ್ಷಿಯು ಇಷ್ಟಪಡುವಂತೆ ಏನನ್ನು (ಇಂದ್ರಿಯಗಳ ಮೂಲಕ ಹೊರಗಿನಿಂದ) ತರುತ್ತದೆಯೋ ಅದನ್ನು ಸಾಕ್ಷಿಗೆ ತೋರಿಸುವುದಕ್ಕೆ ಮುನ್ನವೇ ಆ ವಸ್ತುವಿನ ಸಹಿತವಾಗಿ ಮನಸ್ಸು ಮಾಯವಾಗುತ್ತದೆ, ಹೊರಗೋಡುತ್ತದೆ.

ಸಾಕ್ಷಿಯು ತನ್ನನ್ನು ನೋಡಲಿ ಎಂದು ಸದಾ ಆಸೆ ಪಡುವ ಮನಸ್ಸು, ಒಮ್ಮೆ ಸಾಕ್ಷಿಯೇನಾದರೂ ಮನಸ್ಸನ್ನು ದಿಟ್ಟಿಸಿ ನೋಡಿದರೆ ನಾಚಿ, ಕರಗಿ ಮನಸ್ಸು ಮಾಯವಾಗುತ್ತದೆ. ಆಗ ಸದ್ದೂ ಇನ್ನೇನೂ ಉಳಿದಿರದು.

ಸೃಷ್ಟಿ ಪ್ರಪಂಚದ ಎಲ್ಲವನ್ನು ತಂದು ತನ್ನೊಳಗಿನ ಆತ್ಮನಿಗೆ ತೋರಿಸುತ್ತೇನೆ ಎಂದು ಬಯಸುವ ಮನಸ್ಸಿಗೆ, ನಿಜವಾಗಿ ತನ್ನೊಳಗಿರುವ ಆತ್ಮವೇ ಎಲ್ಲಕ್ಕಿಂತ ಪ್ರಿಯ, ಸುಂದರ, ಪರಿಪೂರ್ಣ, ಆನಂದದಾಯಕ ಅಂತ ಗೊತ್ತಿಲ್ಲ.

ಆತ್ಮವು ಮನಸ್ಸನ್ನು ಒಮ್ಮೆಯಾದರೂ ಬಿಟ್ಟಿಸಿದಾಗ, ತತ್ಪರಿಣಾಮವಾಗಿ ಮನಸ್ಸು ಸ್ತಬ್ಧವಾದಾಗ, ಅಲ್ಲಿಯೇ ಆಗಲೇ ಎಲ್ಲವೂ ಆನಂದಮಯ, ಇನ್ನೇನೂ ಬಯಸುವುದಿಲ್ಲ
ಮನಸ್ಸಿನ ಅತೀತವಾಗಿ ಪಂಚಕೋಶಗಳನ್ನು ಗೆದ್ದು / ಮೀರಿ ಆನಂದವನ್ನು ಅರಿಯಬೇಕು

ಹೀಗೆ ವೇದಾಂತವು ನಮ್ಮನ್ನು ಕುರಿತು ನಾವು ಜಗತ್ತನ್ನು ಯಾವ ರೀತಿ ಅನುಭವಿಸಬೇಕು ಹೆ ಯಾವ standardನಲ್ಲಿ ನಿಂತು ಜಗತ್ತನ್ನು ನೋಡಬೇಕು ಎಂದು ಹೇಳುತ್ತದೆಯೋ ಅಸರ ವಿಷಯ ಬಿಂದುವನ್ನು

ಬಿಬ್ಬ ಬಿಡಬೇಕು, ಕಳೆದುಕೊಳ್ಳಬೇಕು
ಅಥವಾ ದೂರವಾಗಬೇಕು ಎಂತ ಹೇಳುತ್ತಿಲ್ಲ

ಪಂಚಕೋಶಗಳ ಭಿನ್ನತೆಯಿಂದ
ಆನಂದದ ನೆಲೆಯನ್ನು ಪಡೆದವನಿಗೆ
ಪ್ರಪಂಚವೆಲ್ಲ ಆನಂದ ಸ್ವರೂಪ,
ಆನಂದವೇ.
ಆ ಆನಂದದ ರಸವನ್ನುಂಡ ಮೇಲೆ,
ರಸವನ್ನುಂಡವನಿಗೆ ಪಂಚಕೋಶಗಳು
ಆ ಆನಂದಮಯವಾಗಿಯೇ ಪರಿಣಮಿಸುತ್ತವೆ
ಮಂಜುಗಡ್ಡೆಯೊಳಗೆ ಎತ್ತಲೂ ನೀರೇ
ತುಂಬಿಕೊಂಡಿರುವಂತೆ ಆತನಿಗೆ ಪ್ರಪಂಚ
ಆನಂದ ಘನವೆತ್ತೆತ್ತಲೂ.
ವಸ್ತುತಃ ಪಂಚಕೋಶಗಳು ಆನಂದವೇ.
ಕಬ್ಬಿಣದ ಕಾರ್ಖಾನೆಯಲ್ಲಿ ಕಾವಲುಗಾರನ
ಪ್ರತಿಮೆ ಮಾಡಿಟ್ಟಿದ್ದಾರಂತೆ. ಇದಕ್ಕೆ
ಮಾಡಿರುವ ಅಂಗಾಂಗವೆಲ್ಲ ಕಬ್ಬಿಣ. ಇದರ
ಅಂಗಿ, ಖಡ್ಗ, ಟೋಪಿ, ಬೂಟ್ಸ್ ಎಲ್ಲವೂ
ಕಬ್ಬಿಣಮಯ. ಕರೆಯುವುದು ಮಾತ್ರ
ಅವನ್ನ ಅಂಗಿ, ಖಡ್ಗ, ಅಂತ. Material
ಒಂದೇ

ಅಂದರೆ ಕಲ್ಪನೆಯನ್ನೇ ಅದು, ಇದು
ಅಂತ ಕಲ್ಪಿಸಿದಂತೆ ನೋವು ಆನಂದವನ್ನೇ
ವಿವಿಧ ಕೋನಗಳನ್ನಾಗಿ ಕಲ್ಪಿಸಿಕೊಂಡವು,
ಆ ಕೋನಗಳನ್ನು ನಮ್ಮ ಮೇಲೆ ಆರೋಪಿಸಿ
ಕೊಂಡು, ಅಂಗೀಕರಿಸಿಕೊಂಡು, 'ನಾನು
ಭೋಗಿಸುತ್ತೇನೆ' 'ನಾನು ತಿಳಿಯುತ್ತೇನೆ',
'ನಾನು ಚಿಂತಿಸುತ್ತೇನೆ' ಎಂಬ 3 ಬಗೆಯ
ಸೂಕ್ಷ್ಮ ಶರೀರದ ಕೋನಗಳಾಗಿಯೂ
ನಾ ಮಾಡುತ್ತೇನೆ, ನಾನು ನಿಂತಿದ್ದೇನೆ
ಎಂಬ 2 ಬಗೆಯ ಸ್ಥೂಲ ದೇಹದ
ಕೋನಗಳನ್ನಾಗಿಯೂ ಅಂದು ಕೊಳ್ಳುತ್ತೇವೆ,
ಹಾಗೆ ಅಂದುಕೊಂಡು 'ನಾನು ಅನುಭವಿಸು
ತ್ತಿದ್ದೇನೆ' ಎಂದು ಭಾವಿಸಿಕೊಳ್ಳುತ್ತೇವೆ
ಇದು ಭ್ರಾಂತಿ
ಒಳಗೆ ನಿಜವಾಗಿ ಇರುವವನು, ಅವನಿಂದಾಗಿ,
ಅವನಿಗೋಸ್ಕರ ಇವನು ಕುಣಿಯುತ್ತಿರುವುದು.
ಇವನು ಅನುಭವಿಸುತ್ತಾನಂತೆ! ಏನು
ಇವನು ಅನುಭವಿಸಿದ್ದು?

ಮೇಲ್ಕಂಡ ಭ್ರಾಂತಿಗಳನ್ನೆಲ್ಲಾ ಇಲ್ಲಗೈದು
ಆನಂದಮಯನಾಗಿ ಹೊರಬರುವ. ಆಗ ಇವನು
ನಿಜವಾದ ನಾನು = (ಎಂದರೆ) ನಾನು ಎಂಬ ಅಹಂಭಾವವಿಲ್ಲದ
ನಾನು ಆಗುವನು.
ಮೇಲ್ಕಂಡ ~~[illegible]~~ (ಆತ್ಮನ) ಸ್ವರೂಪವ
ವನ್ನು ನಮ್ಮ ಗಮನಕ್ಕೆ ತರಲೆಂದೇ
ಬರೆದಿರುತ್ತೇನೆ ಇದು ನಿರಂತರ ಕ್ರಿಯಾ ಪ್ರಕ್ರಿಯೆ
ಯಲ್ಲಿ ಸುತ್ತುತ್ತಿರುವ ಉದಾಹರಣೆ ಕೊಟ್ಟಿದೆ.
ಇಲ್ಲಿ ನಾನು ಇರುತ್ತೆ, ನಾನು ಎಂಬುದು ಇರೋಲ್ಲ
(ಅಹಂಭಾವವಿಲ್ಲದ ನಾನು ಇಲ್ಲವಾದ)
ಅದರಿಂದ ಹೊರಬಂದ, = ಎಚ್ಚೆತ್ತ
ಮೇಲೆ ಇಲ್ಲಿ ಇದನ್ನು ಬರೆಯುತ್ತಿದ್ದೇ
ತ್ತಾನೆ. ಆ ಇಲ್ಲದ್ದು ಪರಮಾನಂದವು
ಇಲ್ಲಿ ನಿಗೂಢವಾದುದಲ್ಲ.
ಅದು ಇಲ್ಲಿ ಸಿಕ್ಕದು; ಅದು ಬೇಕಿದ್ದರೆ ಇದು
ಇಲ್ಲಿಗೇ ಹೋಗಬೇಕು (ಕತ್ತಲೆಯ ಭಾಗವಲ್ಲ
ಕೈಗೆ ಸಿಕ್ಕಂತ ಪದಾರ್ಥವನ್ನು ಎದುರಿಗೆ
ಬಚ್ಚಿಟ್ಟಿದ್ದ ಬೇರೆಯವರು ಹುಡುಕುತ್ತಿದ್ದ
ಹಾಗೆ)
ನೀರಿನಾಗಿ ಬಾವಿಗೆ ಇಳಿಸಿದರೆ ಸಾಲದು,

ಬಾಯಿಂದಲ್ಲ ಇಲ್ಲಿಂದ ಬೇಕು.
ನಾನೆ ಆನಂದದ ಸ್ವರೂಪ ಇದೆ.
ಪ್ರಶ್ನೆ: ನಾನಾದರೆ ಆನಂದ ಬೇಕಿದ್ದರೆ
ನಿದ್ದೆ ಮಾಡಬೇಕೆ ?
ನಾನಲ್ಲ. ಆ ಆನಂದವು ನಮ್ಮ ಅಂತಃಕರಣದ
ಆಳದಲ್ಲಿ, ನಿಜವಾಗಿ ವಿಸ್ತಾರದಲ್ಲಿಯು
ಇರುತ್ತದೆ. ಸಮುದ್ರವು ಸದಾ ಸಮುದ್ರವೇ
ಆಗಿದ್ದರೂ, ಮೇಲ್ಪದರದಲ್ಲಿ ಅಲೆ, ಸುಳಿ,
ನೊರೆಗಳಿಂದ ಆವೃತವಾಗಿ ಆಳದ
ದೃಶ್ಯವು ಕೊಂಚ ಮರೆಯಾದ ಹಾಗೆ
ಕಾಣುವಂತೆ ತತ್ವ ಸ್ವರೂಪವು ಈ
ವಿವಿಧವಾದ, ಕಲ್ಪಿತವಾದ ನಾನು ಎಂಬ
ವಿಕೃತ ಭಾವಗಳಿಂದ ~~ಕೊಂಚ~~ ಕೊಂಚ
ಮುಸುಕಾಗಿರುತ್ತದೆ. ಇವುಗಳ ಮಧ್ಯ
ದಲ್ಲಿರುವ ನಿಜವಾದ ತನ್ನನ್ನು ಪ್ರತಿಯೊಬ್ಬರು
ಗುರುತಿಸಿ ಕಂಡುಕೊಳ್ಳಬೇಕು. ಅದೇ
ಆತ್ಮ ಸಾಕ್ಷಾತ್ಕಾರ.
ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ
ನನ್ನಲ್ಲಿ ಪ್ರಯತ್ನ ಮಾಡಬೇಕು; ಎಲ್ಲಿಗೂ
ಎಲ್ಲಿಗೂ ಹೋಗಬೇಕು ಎಂದು

ಗಾಬರಿಯಾಗಬೇಕಾಗಿಲ್ಲ.
ಅದು ಇರುವುದೇನೇ, ಅದನ್ನು ನೀನು
ಗುರುತಿಸಬೇಕು, ಅಷ್ಟೆ!
ಹಾಗೆ ನನ್ನೊಳಗೆ / ನಿನ್ನೊಳಗೇ ಆನಂದ
ಇದೆ ಎಂಬ (ಆತ್ಮ) ಜ್ಞಾನವು ಬಹಳ
ದೃಢವಾಗಿ ಬೇರೂರಿಬಿಟ್ಟರೆ ಆಮೇಲೆ
ಯಾವ ಭಯಕ್ಕೂ ಕಾರಣವಿರದು
ಭಯಕ್ಕೆ ಕಾರಣ ಅಜ್ಞಾನ.
ಜ್ಞಾನವುಂಟಾದಾಗ ಬ್ರಹ್ಮವಿದ,
ಬ್ರಹ್ಮೈವ ಭವತಿ.

ಪಂಚಕೋಶಗಳನ್ನು ಭಸ್ಮಗೊಳಿಸಬೇಕು
ಅವನ್ನು ಬಳಸಿಕೊಳ್ಳುವುದಲ್ಲ, ಎಚ್ಚರಿಕೆ.